ಕರ್ನಾಟಕ ವಿಧಾನಸಭೆ

ಶುಕ್ರವಾರ 12ನೇ ಜುಲೈ 2002 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ : 10.00 ಗಂಟೆ 8 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು ಶ್ರೀ ಎಂ.ವಿ. ವೆಂಕಟಪ್ಪರವರು ಪೀಠವನ್ನು ಅಲಂಕರಿಸಿದ್ದರು.

1. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ವಿಷಯ:- ಬೆಂಗಳೂರು ಸುತ್ತಮುತ್ತಲಿನ ನಗರ ಸಭೆಗಳಲ್ಲಿ ಲೋಕಾಯುಕ್ತರ ಧಾಳಿಯಿಂದ ಬೆಳಕಿಗೆ ಬಂದ ಭ್ರಷ್ಟಾಚಾರ ಪ್ರಕರಣಗಳ ಬಗ್ಗೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೇ, ಬೆಂಗಳೂರಿನ ಸುತ್ತಮುತ್ತಲಿರುವ ನಗರಸಭೆಗಳು ಏನಿವೆ ಅಲ್ಲಿಲ್ಲಾ ದೊಡ್ಡ ಪ್ರಮಾಣದ ಭ್ರಷ್ಟಾಚಾರ ಪ್ರಕರಣಗಳಲ್ಲಿ ಏನು ನಡೆದಿವೆ ಆ ಭ್ರಷ್ಟಾಚಾರ ಪ್ರಕರಣಗಳು ಇವೊತ್ತು ಹೊರಗೆ ಬಂದಿವೆ. ಲೋಕಾಯುಕ್ತರಾದ ನ್ಯಾಯಮೂರ್ತಿ, ಶ್ರೀ ವೆಂಕಟಾಚಲಯ್ಯನವರು ಇತ್ತೀಚಿನ ಕೆಲವು ದಿವಸಗಳಿಂದ ಬೇರೆ ಬೇರೆ ಇಲಾಖೆಗಳ ಕಛೇರಿಗಳಿಗೆ ಭೇಟಿ ಕೊಟ್ಟಿದ್ದಾರೆ. ಆಸ್ಪತ್ರೆಗಳಿಗೆ ಏನು ಭೇಟಿ ಕೊಟ್ಟಿದ್ದರು ಅದೇ ರೀತಿಯಲ್ಲಿ ಅವರು ನಗರಸಭೆಗಳಿಗೆ ಭೇಟಿ ಕೊಟ್ಟು ಹಲವಾರು ಕಾಗದ ಪತ್ರಗಳನ್ನು ವಶಪಡಿಸಿಕೊಂಡು ಧಾಳಿ ಮಾಡಿದಂಥ ಸಂದರ್ಭದಲ್ಲಿ ನೂರಾರು ಕೋಟಿ ರೂಪಾಯಿಗಳ ಭ್ರಷ್ಟಾಚಾರ ಹಗರಣಗಳು ಹೊರಗೆ ಬಂದಿವೆ. ನಾವು ಅದರ ಬಗ್ಗೆ ಪ್ರಸ್ತಾಪ ಮಾಡುವವರಿದ್ದೇವೆ; ಅದರ ಬಗ್ಗೆ ಈ ಸದನದಲ್ಲಿ ಚರ್ಚೆಯಾಗಬೇಕಾಗಿದೆ. ಇದರಲ್ಲಿ ದೊಡ್ಡ ದೊಡ್ಡ ವ್ಯಕ್ತಿಗಳು ಇದ್ದಾರೆ, ಆದಕಾರಣ ನಾನು ನಿಲುವಳಿ ಸೂಚನೆಯನ್ನು ಮಂಡಿಸಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳೂ ಕೂಡ, ಈ ರೀತಿಯ ಭ್ರಷ್ಟಾಚಾರ ಪ್ರಕರಣಗಳು ನಡೆದ ಬಗ್ಗೆ ಸದನದಲ್ಲಿ ಚರ್ಚೆ ಮಾಡುವುದಕ್ಕೆ ನಾನು ತಯಾರಿದ್ದೇನೆ ಎನ್ನುವ ಮಾತನ್ನು ಹೇಳಿದ್ದಾರೆ. ಹೀಗಾಗಿ ಬೋಫೋರ್ಸ್ ಹಗರಣಕ್ಕಿಂತ ದೊಡ್ಡದಾದ ಹಗರಣ ಇದಾಗಿದೆ.

ಅಧ್ಯಕ್ಷರು : ಆಯಿತು, ಡೀಟೈಲ್ಸ್‌ಗೆ ಹೋಗಬೇಡಿ. ನಾನು ಇದನ್ನು ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ತೆಗೆದುಕೊಳ್ಳುತ್ತೇನೆ. ಆಮೇಲೆ ನೋಡೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಅಧ್ಯಕ್ಷರೆ, ಈ ಆಡಳಿತದಲ್ಲಿರತಕ್ಕಂಥ ಜನರೆಲ್ಲರೂ ಕಡಿಮೆ ಮಾತನಾಡಿಕೊಂಡು ಇವರೆಲ್ಲಾ ಕರೆಕ್ಟ್ ಪ್ರಿಸಿಡೆಂಟ್‌ಗಳನ್ನು ಹಾಕಿದ್ದಿದ್ದರೆ ವಿರೋಧಪಕ್ಷದ ನಾಯಕರು ಮತ್ತು ನಾವು ನಿಲುವಳಿ ಸೂಚನೆಯನ್ನು ಕಳುಹಿಸುತ್ತಿರಲಿಲ್ಲ. ಪ್ರಶ್ನೋತ್ತರ ವೇಳೆ ಆದಮೇಲೆಯೇ ನಾವು ಇದನ್ನು ಕೇಳುತ್ತಿದ್ದೆವು. ಕರಪ್‌ಷನ್ ಕೇಸ್ ಬಂದಾಗ ಹಿಂದೆ 15 ದಿವಸಗಳ ಕಾಲ, 20 ದಿವಸಗಳ ಕಾಲ ಪಾರ್ಲಿಮೆಂಟ್ ನಡೆಸದೇ ನಿಲ್ಲಿಸಿರುವ ಇತಿಹಾಸವನ್ನು ಇಟ್ಟುಕೊಂಡಿರುವಾಗ, ನೀವು ನಮಗೆ ಇಲ್ಲಿ ಈಗ ಈ ವಿಚಾರ ರೈಸ್ ಮಾಡಬೇಡಿ ಎಂದು ಹೇಳಿದರೆ ನಾವು ಕಣ್ಣು ಮುಚ್ಚಿಕೊಂಡು ಕುಳಿತುಕೊಳ್ಳುವುದಕ್ಕಾಗುತ್ತದೆಯೇ?

ಅಧ್ಯಕ್ಷರು : ಯಾರೂ ಆ ರೀತಿ ಹೇಳಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ತಾವು ಪ್ರಶ್ನೋತ್ತರವನ್ನು ಸಸ್ಪೆಂಡ್ ಮಾಡಿ, ದಯಮಾಡಿ ತಾವು ಈ ವಿಚಾರವನ್ನು ಅಡ್ವರ್ನ್‌ಮೆಂಟ್ ಪೋಷನ್‌ನಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಆಯಿತು, ಆಮೇಲೆ ಮಾತನಾಡೋಣ. ನಾನು ಏನು ಮಾಡುತ್ತೇನೆ ಎಂಬುದನ್ನು ಪ್ರಶ್ನೋತ್ತರ ವೇಳೆ ಆದಮೇಲೆ ಹೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, 200 ಕೋಟಿ ರೂಪಾಯಿಗಳ ಅವ್ಯವಹಾರ ನಡೆದಿದೆ. ಬಹುಶಃ ನಮ್ಮ ಕರ್ನಾಟಕದಲ್ಲಿ ಬೇರೆ ಇಂಥ ದೊಡ್ಡ ಪ್ರಮಾಣದ ಹಗರಣ ಯಾವುದೂ ನಡೆದಿರಲಿಕ್ಕಿಲ್ಲ.

ಅಧ್ಯಕ್ಷರು : ಅದು ಸರಿ. ಪ್ರಶ್ನೋತ್ತರ ವೇಳೆ ಆದಮೇಲೆ ನೋಡೋಣ. ಅಷ್ಟರೊಳಗೆ ನಾನೂ ಕೂಡ ಥಿಂಕ್ ಮಾಡಬೇಕಲ್ಲಾ. ಇದೇನು, ಇದರ ಬಗ್ಗೆ ಸಿ.ಎಂ. ಏನು ಹೇಳಿದ್ದಾರೆ ಎಂಬ ಬಗ್ಗೆ ನಾನು ಸ್ವಲ್ಪ ಮೈಂಡ್ ಅಪ್ಲೈ ಮಾಡಬೇಕಲ್ಲಾ. ನೀವು ಕೇಳಿದ ತಕ್ಷಣ ನಾನು ಹೇಳಿಬಿಡುವುದಕ್ಕೆ ಆಗುತ್ತದೆಯೇ? ಮೈಂಡ್‌ನ್ನು ಸ್ವಲ್ಪ ನಾನು ಅಪ್ಲೈ ಮಾಡಬೇಕು. ನಾನು ಬಂದಿದ್ದೇ 9 ಗಂಟೆ 50 ನಿಮಿಷಕ್ಕೆ, ಆಗ ತಾನೇ ನನಗೆ ತಂದುಕೊಟ್ಟರು, ನಾನೂ ಕೂಡ ಸ್ವಲ್ಪ ನೋಡಬೇಕಲ್ಲಾ. ಏನು ಪ್ರಸ್ತಾಪ ಇದೆ ಎಂಬ ಬಗ್ಗೆ ನಾನೂ ಕೂಡ ನೋಡಿ ಹೇಳುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ : ಪ್ರಶ್ನೋತ್ತರವನ್ನು ಸಸ್ಪೆಂಡ್ ಮಾಡಬೇಕಾಗುತ್ತದೆ, ರೂಲ್ಸ್ ಪ್ರಕಾರ ತಮಗೆಲ್ಲಾ ಗೊತ್ತಿದೆಯಲ್ಲಾ.

ಶ್ರೀ ಎ. ರಾಮದಾಸ್ : ನಮಗೆ ವಿಶ್ವಾಸವಿದೆ. ಇದರ ಬಗ್ಗೆ ನಿಮಗೆ ಕನ್‌ವಿನ್ಸ್ ಆಗುತ್ತದೆ. ಆ ದೃಷ್ಟಿಯಿಂದ ನಿಲುವಳಿ ಸೂಚನೆಗೆ ಅವಕಾಶ ಮಾಡಿಕೊಡುತ್ತೀರಿ ಎನ್ನುವ ವಿಶ್ವಾಸ ನಮಗೆ ಇರುವುದರಿಂದ ಬಾಕಿ ಬಿಸಿನೆಸ್ಸ್‌ನ್ನು ಬದಿಗೊತ್ತಿ ದಯಮಾಡಿ ತಾವು ಮೊದಲು ಈ ನಿಲುವಳಿ ಸೂಚಿಯ ವಿಷಯದ ಚರ್ಚೆಗೆ ಅವಕಾಶ ಮಾಡಿ ಕೊಡಬೇಕು.

ಅಧ್ಯಕ್ಷರು : ನಾನು ಸ್ವಲ್ಪ ಯೋಚನೆ ಮಾಡುವುದಕ್ಕೆ ನನಗೆ ಸಮಯ ಕೊಡಿ. ಪ್ರಶ್ನೋತ್ತರ ವೇಳೆ ಆಗಲಿ.

ಶ್ರೀ ಎ. ರಾಮದಾಸ್ : ಹಾಗಾದರೆ ನಾವು ಪ್ರೆಸೆಂಟ್ ಮಾಡಿಬಿಡುತ್ತೇವೆ. ಆ ನಂತರದಲ್ಲಿ ತಮ್ಮ ಮನಸ್ಸಿಗೆ ಬರುತ್ತದೆ, ನಮಗೆ ಅವಕಾಶ ಕೊಡುತ್ತೀರಿ.

ಅಧ್ಯಕ್ಷರು : ಪ್ರಶ್ನೋತ್ತರ ಅವಧಿಯಲ್ಲಿ ನಾನು ಯೋಚನೆ ಮಾಡುತ್ತೇನೆ, ಇದಕ್ಕೆ ಏನು ಮಾಡೋಣ ಎಂದು. ನಾನು ನನ್ನ ಮೈಂಡ್ ಅಪ್ಲೈ ಮಾಡುತ್ತೇನೆ. ಈಗ ಮೊದಲು ಪ್ರಶ್ನೋತ್ತರ ತೆಗೆದುಕೊಳ್ಳೋಣ. ಇದು ಮುಗಿದಮೇಲೆ ನಾನು ಹೇಳತ್ತೇನೆ. You please co-operate.